ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **340/2020**

| | | |
|---|---|---|
| ಸಾಕ್ಷಿಯ ಹೆಸರುಃ | ಸುವರ್ಣಾ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ವಿನೋದ ಕುಮಾರ | ಚಾಸಾಃ 1 |
| ವಯಸ್ಸು ಃ | 35 ವರ್ಷ | ದಿಃ 07-03-2026 |
| ಉದ್ಯೋಗಃ | ಪಿ.ಎಸ್.ಐ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಬೀದರ | |

ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು. ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಜಿ. ಎಮ್, ಎಮ್. ವಕೀಲರಿಂದ.

1. ಕಳ್ಳಬಟ್ಟಿ ಸಾರಾಯಿ ಬೇರೆ ಹೆಂಡ ಬೇರೆ ಎಂದರೆ ಸರಿ. ಚಾಸಾಃ 4 ರವರ ಮೂಲಕ ಪಂಚರನ್ನು ಕರೆಸಿರುತ್ತಾರೆ. ದಾಳಿ ಮಾಡಿದಾಗ ಗುನ್ಹೆ ಸ್ಥಳದಲ್ಲಿ 8-10 ಜನರು ಇದ್ದರು. ಸದರಿ ಅವರ ಹೆಸರು ನೆನಪಿರುವುದಿಲ್ಲ. ಸ್ಥಳೀಯ ಪಂಚರನ್ನೆ ಪಂಚರನ್ನಾಗಿ ಮಾಡಿರುತ್ತೇವೆ. ಸದರಿ ಪಂಚರು ಸ್ಥಳೀಯರಲ್ಲ ಎಂದರೆ ಸರಿಯಲ್ಲ. ಸದರಿ ಗುನ್ಹೆ ಸ್ಥಳಕ್ಕೆ ನಿಖರವಾದ ಓಣಿ ಇರುವುದಿಲ್ಲ. ಆರೋಪಿತಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ಗುನ್ಹೆ ಸ್ಥಳಕ್ಕೆ ಹೋಗಿರುವುದಿಲ್ಲ ಯಾವುದೇ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ದಿಕ್ಕಿಗೆ ಓಡಿ ಹೋಗಿರುತ್ತಾಳೆ ಎಂದರೆ ಗೊತ್ತಿಲ್ಲ. ಚಾಸಾಃ 6 ರವರು ನಿಪಿ-1 ನ್ನು ತಯಾರಿಸಿರುತ್ತಾರೆ. ಸದರಿ ನಾನು ಯಾವದೇ ದಾಳಿ ಮಾಡದೇ ಇದ್ದರೂ ಕೂಡ ಮತ್ತು ಯಾವುದೇ ಪಂಚನಾಮೆಯನ್ನು ಮಾಡದೇ ಇದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **340/2020**

| | | |
|---|---|---|
| ಸಾಕ್ಷಿಯ ಹೆಸರುಃ | ಸೈಯದ ಅಲಿ | ಪ್ರಾಸಾಃ 5 |
| ತಂದೆ/ಗಂಡನ ಹೆಸರುಃ | ಅಬ್ದುಲ್ ಖಾದರ | ಚಾಸಾಃ 4 |
| ವಯಸ್ಸು ಃ | 45 ವರ್ಷ | ದಿಃ 07-03-2026 |
| ಉದ್ಯೋಗಃ | ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ. | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು 2019 ರಿಂದ 2021 ರವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಮುಖ್ಯ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 01-05-2020 ರಂದು ನಾನು ಠಾಣೆಯಲ್ಲಿದ್ದಾಗ, ಚಾಸಾಃ 1 ರವರು ನನಗೆ, ಚಾಸಾಃ 5, 6 ಮತ್ತು ಪಂಚರನ್ನು ಕರೆಯಿಸಿ, ಸೈದಾಪೂರ ಗ್ರಾಮದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಕಳ್ಳಬಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಿದ್ದಾನೆ ಎಂದು ಹೇಳಿರುತ್ತಾರೆ. ಮದ್ಯಾಹ್ನ 1.40 ಕ್ಕೆ ಠಾಣೆಯಿಂದ ಬಿಟ್ಟು ಗುನ್ಹೆ ಸ್ಥಳದ ಹತ್ತಿರ ಹೋಗಿ ಮರೆಯಾಗಿ ನಿಂತು ನೋಡಲಾಗಿ ಆರೋಪಿತನು ಕಳ್ಳಬಟ್ಟಿ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿದಾಗ ಆರೋಪಿತನು ಓಡಿ ಹೋಗಿರುತ್ತಾನೆ. ಸ್ಥಳ ಪರಿಶೀಲಿಸಿದಾಗ 11 ಲೀಟರ ಕಳ್ಳಬಟ್ಟಿ ಸಾರಾಯಿ ಸಿಕ್ಕಿರುತ್ತದೆ. 1 ಲೀಟರ ಬಾಟಲಿಯನ್ನು ಎಫ್ ಎಸ್, ಎಲ್ ವರದಿಗಾಗಿ ಪಡೆದುಕೊಂಡು ಕಳುಹಿಸಿರುತ್ತೇವೆ. ಪಂಚರ ಸಮಕ್ಷಮದದಲ್ಲಿ 1.50 ರಿಂದ 2.50 ರವರೆಗೆ ಪಂಚರ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಅಂದಾಜು ಕಿ. 2,200/-ರೂ. ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಲಯದ ಮುಂದೆ ಇರುವ ಆರೋಪಿತಳನ್ನು ಮತ್ತು ಮು. ಮಾ. ಗಳನ್ನು ನೋಡಿ ಗುರತಿಸಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಜಿ. ಎಮ್. ಎಮ್. ವಕೀಲರಿಂದ.

1. ಕಳ್ಳಬಟ್ಟಿ ಸಾರಾಯಿ ಮತ್ತು ಹೆಂಡ ಬೇರೆ-ಬೇರೆ ಎಂದರೆ ಸರಿ. ಹೆಂಡಕ್ಕೆ ತಾಡಿ ಎನ್ನುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಪಂಚರನ್ನು ಚಾಸಾಃ 1 ರವರು ಕರೆಸಿರುತ್ತಾರೆ. ಸದರಿ ಪಂಚರು ಗುನ್ಹೆ ಸ್ಥಳದ ಸ್ಥಳೀಯರು ಇರುವುದಿಲ್ಲ ಎಂದರೆ ಸರಿ. ನಾನು ಪಂಚರನ್ನು ಕರೆದುಕೊಂಡು ಬಂದಿರುವುದಿಲ್ಲ. ಸದರಿ

ಗುನ್ಹೆ ಸ್ಥಳದಲ್ಲಿ ಸುಮಾರು 4-5 ಜನರು ಗ್ರಾಹಕರು ಇದ್ದರು, ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಪ್ರತ್ಯೇಕ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ಆರೋಪಿತಳು ಬಸ್ ಸ್ಟ್ಯಾಂಡ ಕಡೆಗೆ ಓಡಿ ಹೋಗಿರುತ್ತಾಳೆ. ಚಾಸಾಃ 1 ರವರು ಆರೋಪಿತಳನ್ನು ಹಿಡಿಯಲು ಪ್ರಯತ್ನ ಮಾಡಿರುತ್ತಾರೆ. ಚಾಸಾಃ 6 ರವರು ನಿಪಿ-1 ನ್ನು ತಯಾರಿಸಿರುತ್ತಾರೆ. ಸದರಿ ಆರೋಪಿತಳು ಕಳ್ಳಬಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾಳಿ ಮಾಡಿ ಜಪ್ತಿ ಮಾಡಿರುತ್ತೇವೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ